**ದಿಃ 11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ. ಎಮ್.ಬಿ.ಎನ್ ವಕೀಲರಿಂದಃ ಅರ್ಜಿದಾರರ ಪರವಾಗಿಃ**

ಅರ್ಜಿದಾರರನ್ನು ಪರೀಕ್ಷೆ ಮಾಡಿ ದಾಖಲೆಗಳನ್ನು ಪರಿಶೀಲಿಸಿ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ಸದರಿ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಗುರುತಿಸಿದ್ದು, ಈಗಾಗಲೇ ನಿ.ಪಿ-8 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ವಿ.ಎಸ್.ಎ ವಕೀಲರಿಂದಃ 2 ನೇ ಎದುರುದಾರರ ಪರವಾಗಿಃ**

ಅಪಘಾತವಾದ ತಕ್ಷಣ ನಾನು ಅರ್ಜಿದಾರರಿಗೆ ಸ್ವತಃ ಚಿಕಿತ್ಸೆ ಕೊಟ್ಟಿರುವದಿಲ್ಲ ಅಂದರೆ ಸರಿ. ಅದೇ ರೀತಿ ನನಗೆ ಸಾಕ್ಷಿ ಹೇಳಲು ಬರಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ ಎಂದರೆ ಸರಿ. ನಾನು ಹಲವಾರು ಅಪಘಾತದ ಪ್ರಕರಣಗಳಲ್ಲಿ ಸಾಕ್ಷಿ ನುಡಿದು ಅಂಗನ್ಯೂನತೆ ಪ್ರಮಾಣ ಪತ್ರಗಳನ್ನು ಕೊಟ್ಟಿರುತ್ತೇನೆ. ನಾನು ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಕೇವಲ ಅಂಗನ್ಯೂನತೆ ಪ್ರಮಾಣ ಪತ್ರ ಕೊಡುವಾಗ ಅವರನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ

ಸರಿ. ಆ ಸವಯದಲ್ಲಿ ಅವರ ಗಾಯದ ಪ್ರಮಾಣ ಪತ್ರ ಮಾತ್ರ ಪರಿಶೀಲನೆ ಮಾಡಿ ನೋಡಿರುತ್ತೇನೆ. ಸದರಿ ದಾಖಲಾತಿಗಳ ಪ್ರಕಾರ ಅರ್ಜಿದಾರರಿಗೆ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುತ್ತದೆ. ಅರ್ಜಿದಾರನು ಮೊದಲಿಗೆ ಚಿಕಿತ್ಸೆ ಮಾಡಿದ ವೈದ್ಯರು ತೆಗೆದಂತಹ ಕ್ಷ-ಕಿರಣಗಳನ್ನು ನಾನು ಪರಿಶೀಲನೆ ಮಾಡಿ ನೋಡಿರುವುದಿಲ್ಲ. ಅದೇ ರೀತಿ ಅರ್ಜಿದಾರರಿಗೆ ಮೊದಲಿಗೆ ಚಿಕಿತ್ಸೆ ಕೊಟ್ಟಂತಹ ಎಕ್ಸರೇ ಫಿಲಂಗಳು ಅಂಗನ್ಯೂನತೆ ಪ್ರಮಾಣ ಪತ್ರ ಕೊಡುವಾಗ ಡಿಸಚಾರ್ಜ ಸಮರಿ ಮತ್ತು ಇನ್ನಿತರ ದಾಖಲಾತಿಗಳು ಹೇಗೆ ಅವಶ್ಯಕವೋ ಅದೇ ರೀತಿ ಎಕ್ಸರೇಗಳು ಅವಶ್ಯಕತೆ ಇರುತ್ತವೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ಅಂಗನ್ಯೂನತೆ ಸೂತ್ರಗಳ ಆಧಾರದ ಮೇಲೆ ಅರ್ಜಿದಾರರಿಗೆ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಕೊಟ್ಟಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಕೇಂದ್ರ ಸರ್ಕಾರದ ಅಂಗನ್ಯೂನತೆ ಸೂತ್ರಗಳ ಆಧಾರದ ಮೇಲಿನ ನಿಯಮಗಳ ಪ್ರಕಾರ ಕೊಟ್ಟಿರುತ್ತೇನೆ. ಸದರಿ ಕೇಂದ್ರ ಸರ್ಕಾರದ ಅಂಗನ್ಯೂನತೆ ಸೂತ್ರಗಳ ಆಧಾರದ ಮೇಲಿನ ನಿಯಮಗಳ ಪ್ರಕಾರ ಮಾತ್ರ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಕೊಡಲು ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮೊದಲು ಚಿಕಿತ್ಸೆ ಕೊಟ್ಟಂತಹ ವೈದ್ಯರು ತಮ್ಮ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಅವರಿಗೆ ಯಾವ ರೀತಿಯ ಮೂಳೆ ಮುರಿತಗಳು ಆಗಿದ್ದವು ಎಂದು ಅರ್ಜಿದಾರರು ನನ್ನ ಮುಂದೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅರ್ಜಿದಾರರಿಗೆ ಆದಂತಹ Dorsi Flexion, Palmar Flexion ಎರಡೂ ನ್ಯೂನತೆಗಳು ಒಂದೇ ಹೆಡನಲ್ಲಿ ಬರುತ್ತವೆ ಆದರೆ ಅವುಗಳನ್ನು ಬೇರೆ ಬೇರೆಯಾಗಿ ಅಂಗನ್ಯೂನತೆ ಕೊಟ್ಟಿರುತ್ತೇನೆ ಎಂದರೆ

ಸರಿಯಲ್ಲ. ಅದೇ ರೀತಿ Radial Deviation and Ulnar Deviation ಎರಡೂ ನ್ಯೂನತೆಗಳು ಒಂದೇ ಹೆಡನಲ್ಲಿ ಬರುತ್ತವೆ ಆದರೆ ಅವುಗಳನ್ನು ಬೇರೆ ಬೇರೆಯಾಗಿ ಅಂಗನ್ಯೂನತೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಂಗನ್ಯೂನತೆಯನ್ನು ಶೇಕಡಾವಾರು ಎಲ್ಲಾ ಕೂಡಿಸಿ ಕೊಡಬೇಕಾದರೆ ಅರ್ಜಿದಾರರ ಮಾಂಸ ಖಂಡಗಳಲ್ಲಿಯ ಶಕ್ತಿಹೀನತೆ ಕುರಿತಾಗಿ ಸದರಿ ನಿಯಮವನ್ನು ಪಾಲಿಸಿ ನಂತರ ಅದಕ್ಕೆ ಸಂಬಂಧಪಟ್ಟ ಅಂಗನ್ಯೂನತೆ ಪ್ರಮಾಣ ಪತ್ರ ಕೊಡಬೇಕಾಗುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಆದಂತಹ ಗಾಯಗಳಲ್ಲಿ ಮಾಂಸ ನಾನು ಅರ್ಜಿದಾರರ ಎಕ್ಸರೇ ಫಿಲಂಗಳನ್ನು ನೋಡಿದಾಗ ಅರ್ಜಿದಾರರಿಗೆ ಆದಂತಹ ಮೂಳೆ ಮುರಿತದ ಗಾಯಗಳು ಅಂಕುಡೊಂಕಾಗಿ ಕೂಡಿಕೊಂಡಿದ್ದವು. ಸದರಿ ವಿಷಯವನ್ನು ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಪಘಾತ ಆದ ನಂತರ ಅವರು ಮೊದಲು ಹೇಗೆ ದುಡಿಯುತ್ತಿದ್ದರೋ ಅದೇ ರೀತಿ ಈಗಲೂ ಕೂಡ ದುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರರ ದೃಢತೆಯ ಸಾಮರ್ಥದಲ್ಲಿ ತೊಂದರೆ ಇರುವುದಿಲ್ಲ. ನಾನು ಅಂಗನ್ಯೂನತೆ ಪ್ರಮಾಣ ಪತ್ರ ಕೊಡುವಾಗ ನಾನು ನಿರ್ದಿಷ್ಟ ಭಾಗಕ್ಕೆ ಮಾತ್ರ ಕೊಟ್ಟಿರುತ್ತೇನೆ. ಸಂಪೂರ್ಣ ದೇಹಕ್ಕೆ ಕೂಡಿಸಿ ಕೊಟ್ಟರೆ 1/3 ಇಷ್ಟು ಶೇಕಡಾವಾರು ಮಾತ್ರ ಬರುತ್ತದೆ. ನಾನು ಅರ್ಜಿದಾರರಿಗೆ ಪರೀಕ್ಷೆ ಮಾಡಿದಾಗ ಯಾವುದೇ ಅಂಗನ್ಯೂನತೆ ಕಂಡು ಬಂದಿಲ್ಲ ಎಂದರೆ ಸರಿಯಲ್ಲ.

ನಾನು ಅರ್ಜಿದಾರರಿಗೆ ಸಹಾಯ ಆಗಲಿ ಎಂದು ಹೆಚ್ಚಿನ ಪ್ರಮಾಣದಲ್ಲಿ ಅಂಗನ್ಯೂನತೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಇಲ್ಲದೇ ಇದ್ದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.